ನೋಡಿದರೆ ಇಲಿಯಾಸ ಸಂತಸದಿಂದ ಅವಳತ್ತ ನೋಡಿ ನಕ್ಕ. 'ಅಲ್ಗೆ ನಿಂಗೆ ಒಪ್ಗೆ ಇದೆ ಅಂತಾಯ್ತು' ಅಂದ ನಗುತ್ತಾ. ಖತೀಜಾ ನಾಚಿ ನಕ್ಕಳು. ಫಾತುಮ್ಮ, 'ಅವಳು ಒಪ್ಪಿದ್ಮೇಲೆ ನಂದೇನೈತೆ? ಎಲ್ಲಾ ನೀವೇಳ್ದಂಗೆ ಆಗ್ಲಿ' ಎಂದಳು.

ನಾಕು ತೊಲೆ ಬಂಗಾರ, ಎರಡು ಸೀರೆ ತಂದುಕೊಟ್ಟು ಸಲೀಸಾಗಿ ಅವಳನ್ನು ನಿಖಾಹ್ ಮಾಡಿಕೊಂಡಿದ್ದ. ಮುಲ್ಲಾನ ಮುಂದೆ ಕಬೂಲಿಯತ್ತಿಗೆ ರುಜು ಹಾಕುವಾಗ ಅರೆಕ್ಷಣ ಕಂಪಿಸಿದ್ದರೂ ಈಗಲಾದರೂ ಶಾದಿಯ ಸುಖ ಬಂತಲ್ಲ ಅಂದುಕೊಂಡಳೇ ವಿನಾ ಅವನ ವಯಸ್ಸನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ ಖತೀಜಾ.

ಮೊದಲಿಗೆ ದಿನವೂ ಬಂದು ರಾತ್ರಿ ಉಳಿದು ಹೋಗುತ್ತಿದ್ದ ಇಲಿಯಾಸ ಅನಂತರದ ದಿನಗಳಲ್ಲಿ ವಾರಕ್ಕೆರೆಡು ಮೂರು ಬಾರಿ ಬರುತ್ತಿದ್ದ. ಅವನಿಂದ ಆದ ಒಂದೇ ಅನುಕೂಲವೆಂದರೆ ಮನೆಯ ದಿನಸಿ ಸಾಮಾನು, ಹಾಲುಹಣ್ಣು, ಮೊಟ್ಟೆ, ಮೀನುಗಳು ಅವನ ಬೊಕ್ಕಣದಿಂದಲೇ ಬರುತ್ತಿದ್ದವು. ಅಕ್ಕಪಕ್ಕದ ಮನೆಯವರಿಗೆಲ್ಲ, 'ಅವರಿಗೆ ಒಬ್ಬಳೇ ಪತ್ನಿ ಇರುವುದು ಅವಳಿಗೆ ಸಖತ್ ಕಾಯಿಲೆ, ಹಂಗಾಗಿ ನಮ್ಮ ಖತೀಜಾನ ನಿಖಾ ಆದರು' ಎಂಬ ಬಿಳೀ ಸುಳ್ಳೊಂದನ್ನು ಸಾರುತ್ತ ಮಗಳು ಅಳಿಯ ಸಿನಿಮಾಗೆ ಹೋಟೆಲ್‌ಗೆ ಹೋಗುವ ವೈಭವವನ್ನು ಬಣ್ಣಿಸುತ್ತಾ ಸುಖಿಸುತ್ತಿದ್ದಳು ಫಾತುಮ್ಮ.

ಮದುವೆಯಾಗಿ ಎರಡನೇ ವರ್ಷಕ್ಕೆ ಇಲಿಯಾಸನಿಗೆ ರಿಟೈರಾಗಿ ಮೈಸೂರಿಗೆ ಕಾಯಂ ಆಗಿ ಹೋಗುವ ಸಂದರ್ಭವೂ ಬಂತು. ಅತ್ತೂ ಕರೆದು ಮಾಡಿದ ಖತೀಜಾಳಿಗೆ ವಾರವಾರವೂ ಬರುತ್ತೇನೆಂಬ ಹುಸಿ ಆಶ್ವಾಸನೆ ಕೊಟ್ಟು ಹೋಗಿದ್ದ. ಆ ವೇಳೆಗೆ ಖತೀಜಾ ಗರ್ಭಿಣಿಯೂ ಆಗಿದ್ದೊಂದು ನೆಪವಾಗಿ ಸ್ವಲ್ಪ ದೂರವೇ ಉಳಿದ. ಹೆರಿಗೆಯಾಗಿ ಒಂದು ವಾರಕ್ಕೆ ಮಗು ನೋಡಲು ಬಂದವನ ಮೇಲೆ ಮುನಿದುಕೊಂಡ ಖತೀಜಾಳಿಗೆ, 'ನಮ್ಮ ನೂರೀದು ನಿಖಾ ಆಯ್ತು. ಅದ್ರಲ್ಲಿ ಬಿಸಿ ಇದ್ದೆ' ಎಂಬ ಸತ್ಯವನ್ನೇ ಹೇಳಿದ್ದ. ತನ್ನ ಕಿರಿಯ ಪತ್ನಿಯಲ್ಲಿ ಈ ಇಳಿವಯಸ್ಸಿನಲ್ಲಿ ಹುಟ್ಟಿದ ಮಗುವಿಗೆ ಅಕ್ಕರೆಯಿಂದಲೇ ಎಲ್ಲ ಅನುಕೂಲ ಮಾಡಿಕೊಟ್ಟು ಊರಿಗೆ ಮರಳಿದ್ದ.

ಮಗುವಿಗೆ ಆರು ತಿಂಗಳು ತುಂಬುವವರೆಗೆ ಆಗಾಗ ಬಂದು ಹೋಗುತ್ತಿದ್ದವ ಏಕಾಏಕಿ ಬರುವುದು ನಿಂತು ಹೋದಾಗ ಖತೀಜಾ ಗಾಬರಿಗೊಂಡಿದ್ದಳು. ಕೆಲ ದಿನಗಳಿಂದ ಫೋನ್ ಸ್ವಿಚ್ ಆಫ್ ಬರುತ್ತಿತ್ತು. ಮೈಸೂರಿಗೆ ಹೋಗಿ ನೋಡಲೇ ಅಂದರೆ ಅವರ ವಿಳಾಸ ಗೊತ್ತಿರಲಿಲ್ಲ. ತುಂಬ ತಳಮಳಗೊಳ್ಳುತ್ತಾ ಮತ್ತೆ ಮತ್ತೆ ಫೋನ್ ಪ್ರಯತ್ನಿಸುತ್ತಿದ್ದಾಗ ಏಕಾಏಕಿ ಫೋನ್ ರಿಂಗ್ ಆಯಿತು. ಅತ್ತಲಿಂದ ಹಲೋ ಎಂಬ ಧ್ವನಿ ಬಂದಾಗ ಅಳುವೇ ಬಂದು, 'ಹೇಗಿದ್ದೀರ? ಅದೇನು ನನ್ನ ಮರೆತೇ ಬಿಟ್ರ?' ಎಂದಳು ಗದ್ಗದಿತಳಾಗಿ. ಅತ್ತಲಿಂದ ಬಂದಿದ್ದು ತನ್ನ ಗಂಡನ ಧ್ವನಿಯಲ್ಲ ಎಂದು ಗೊತ್ತಾದಾಗ ಕಂಗಾಲಾದಳು. 'ನೀವು ಯಾರು? ಯಾರು ಬೇಕಿತ್ತು?' ಅಂದಾಗ ತಬ್ಬಿಬ್ಬಾಯಿತು. ಸಾವರಿಸಿಕೊಂಡು, 'ಇಲಿಯಾಸ್ ಪಾಶಾ ಇದಾರ?' ಎಂದಳು. 'ಅವ್ರು ಹೋಗಿಬಿಟ್ಟರಲ್ಲ... ಒಂದು ತಿಂಗಳಾಯ್ತು. ಹಾರ್ಟ್ ಅಟ್ಯಾಕ್ ಆಯ್ತು. ಅದು ಸರಿ ನೀವ್ಯಾರು?' ಎಂಬ ಧ್ವನಿಗೆ ಉತ್ತರಿಸಲಿಲ್ಲ ಖತೀಜಾ. ಫೋನ್ ಕಟ್ ಮಾಡಲು ತೋಚದೆ ಹಾಗೇ ಅಲ್ಲಿದ್ದ ನಾಗಾಲಿಯಲ್ಲಿ ಕುಳಿತಳು. ಕಣ್ಣಿಂದ ಓತಪ್ರೋತ ಹರಿದ ಕಂಬನಿ ನೋಡಿ ಫಾತುಮ್ಮ ಗಾಬರಿಯಿಂದ, 'ಏನಾಯ್ತೆ? ಸಿಕ್ಕದ್ರಾ ಇಲಿಯಾಸ್? ಏನಂದ್ರು?' ಎಂದು ತ್ವರೆಯಿಂದ ಪ್ರಶ್ನೆಗಳನ್ನೆತ್ತಿದಾಗ... 'ಅವ್ರಿಲ್ಲ ಅಮ್ಮ, ಓಗಿ ಬಿಟ್ರಂತೆ' ಎಂದ ಮಗಳು, 'ಯಾ ಅಲ್ಲಾಹ್!' ಎಂದು ಎದೆ ಹಿಡಿದು ಕುಸಿದ ತಾಯಿಯನ್ನು ಸಮಾಧಾನ ಪಡಿಸುವ ಸ್ಥಿತಿಯಲ್ಲಿರಲಿಲ್ಲ ಖತೀಜಾ.

ಇಳಿ ಸಂಜೆಯ ಹೊತ್ತು... ಮೈಸೂರಿನ ರಾಜೀವ್‌ನಗರದ ಜನ್ನತ್‌ಮಹಲಿನ ಮುಂಭಾಗದ ಅಂಗಳದಲ್ಲಿ ಕುರ್ಚಿಯಲ್ಲಿ ಕೂತಿದ್ದ ಫಾತಿಮಾ ಆಜಾನಿನ ಸದ್ದಿಗೆ ಗಡಬಡಿಸಿ ಮೇಲೆದ್ದು ಮನೆ ಒಳಗೋಗಿ ಹಜಾರದ ಕುರ್ಚಿಯಲ್ಲಿ ಕೂತು ಕಾಬಾದತ್ತ ಮುಖ ಮಾಡಿ ಕುರಾನ್ ಪಠಿಸತೊಡಗಿದಳು. ಅದೇ ವೇಳೆಗೆ ಮನೆಯಗೇಟಿನ ಸದ್ದು... ವಾರೆನೋಟದಿಂದೊಮ್ಮೆ ನೋಡಿದಾಗ ಅವಳ ಮನದ ಶಾಂತಿ ಕದಡಿ ಮುಖ ಬಿಗಿದುಕೊಂಡಿತು. ಕೂಡಿದ ಹುಬ್ಬುಗಳ ಬಿಗಿದ ಮುಖ ಮುದ್ರೆಯಲ್ಲಿ ಸಾಗಿದ ಕುರಾನಿನ ಪಠಣೆಯಲ್ಲಿ ಮನಸ್ಸು ತೊಡಗಿಕೊಳ್ಳದೆ ಅಶಾಂತಿಯಿಂದ ಹೊಯ್ದಾಡತೊಡಗಿತು. ಈಗ್ಯಾಕೆ